# ಚುನಾವಣೆಗೆ ಸ್ಪರ್ಧಿಸುವ ತರಾತುರಿ

ಇಲ್ಲದ್ದೆಲ್ಲಾ ಯೋಚಿಸ್ತ್ಯಾ... ನೀನು ನನ್ನ ಹೆಂಡತಿ.. ನಾನು ಇಷ್ಟಪಟ್ಟು ಮದುವೆಯಾಗಿದ್ದು. ನಿನ್ನ, ನಮ್ಮ ಮನೆಯ ಮಹಾಲಕ್ಷ್ಮಿ ನೀನು. ಈ ನಡುವೆ ಯಾವುದ್ಯಾವುದೋ ಪುಸ್ತಕ ಓದ್ತ್ಯಾ... ಜೊತೆಗೆ ಸ್ತ್ರೀಶಕ್ತಿ ಅಂಥ ಗುಂಪು ಕಟ್ಟಿಕೊಂಡು ಏನೇನೋ ಕಷ್ಟ ಅನುಭವಿಸ್ತಿರೋ ಹೆಂಗಸರನ್ನು ಭೇಟಿ ಮಾಡಿದ್ಯಾ... ಅದಕ್ಕೆ ಇಲ್ಲದ ಯೋಚನೆಗಳು... ನಿಂಗೆ ಹೇಗೆ ಬೇಕೋ ಹಾಗೆ ಮಾಡೋಣ... ನೀನಂದುಕೊಂಡಷ್ಟು ದಡ್ಡ ಅಲ್ಲ ನಾನು.. ರಾಜಕೀಯದಲ್ಲಿ ನನಗೇನು ಪ್ರಯೋಜನ, ಲಾಭ ಅಂತ ನೋಡ್ತೀನಿ.. ಏನೂ ಕಳೆದುಕೊಳ್ಳುವುದಿಲ್ಲ...

ಅಲ್ಲ...

ಈಗ ಪಾರ್ಟಿಗೆ ಸೇರಿ, ನಂಗೆ ಟಿಕೇಟು ಕೊಟ್ಟು, ನಾನು ಚುನಾವಣೆಗೆ ನಿಂತು ಗೆದ್ದ ಮೇಲಿನ ಮಾತು... ಈಗ್ಯಾಕೆ ತಲೆ ಕೆಡಿಸಿಕೊಳ್ತ್ಯಾ? ಈಗ ರೆಡಿಯಾಗು.

